# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **903**

ಸದಸ್ಯರ ಹೆಸರು : ಶ್ರೀ ಸಿ.ಎನ್. ಮಂಜೇಗೌಡ
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸಬೇಕಾದ ದಿನಾಂಕ : 11-03-2026

| | ಪ್ರಶ್ನೆ | ಉತ್ತರ |
|---|---|---|
| (ಅ) | ಬೈಕ್ ಟ್ಯಾಕ್ಸಿಗಳ ಮೇಲಿನ ನಿರ್ಬಂಧವನ್ನು ತೆರವುಗೊಳಿಸಿರುವ ಕರ್ನಾಟಕ ಹೈಕೋರ್ಟ್‌ನ ಇತ್ತೀಚಿನ ತೀರ್ಪು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸೇವೆಯನ್ನು ಸಾರ್ವಜನಿಕ ಸಾರಿಗೆ ಅವಿಭಾಜ್ಯ ಅಂಗವೆಂದು ಪರಿಗಣಿಸಲು ಸರ್ಕಾರಕ್ಕಿರುವ ಕಾನೂನಾತ್ಮಕ ಅಡೆತಡೆಗಳೇನು; | ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿಗಳ ಸಂಖ್ಯೆ: **6421/2022 (MV), 14627/2021 (MV), 19869/2021 (MV)** ಮತ್ತು **24569/2023 (MV)** ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ: **02-04-2025** ರಂದು ಹೊರಡಿಸಿದ ಆದೇಶದಲ್ಲಿ ರಾಜ್ಯದಲ್ಲಿ, ಬೈಕ್ ಟ್ಯಾಕ್ಸಿ ಸೇವೆಯನ್ನು ಸ್ಥಗಿತಗೊಳಿಸುವಂತೆ ಕೆಳಕಂಡಂತೆ ಆದೇಶಿಸಿರುತ್ತದೆ.<br><br>[A] The petitions are disposed of declaring that, unless the State Government notifies relevant Guidelines under Section 93 of the Motor Vehicles Act, 1988 and Rules thereunder, the petitioners cannot operate as Aggregators offering Bike-Taxi Services and the Transport Department, State of Karnataka cannot be issued with directions to register Motorcycles as Transport Vehicles or issue Contract Carriage Permits.<br><br>[B] The petitioners, [M/s Uber India Systems Private Limited, M/s Roppen Transportation Services Private Limited and M/s ANI Technologies Private Limited] are permitted six [6] weeks from today to cease all their operations as aggregators of Bike-taxis. The State Government is called upon to ensure that all Bike Taxi Operations are stopped after these six [6] weeks.<br><br>ಸದರಿ ಆದೇಶದಿಂದ ಬಾಧಿತರಾಗಿ ಓಲಾ, ಉಬರ್, ರಾಪಿಡೋ ಮತ್ತು ಬೈಕ್ ಟ್ಯಾಕ್ಸಿ ಅಸೋಸಿಯೇಷನ್ ಇವರುಗಳು ಮಾನ್ಯ ಉಚ್ಚ ನ್ಯಾಯಾಲಯದ ದ್ವಿ-ಸದಸ್ಯ ಪೀಠದ ಮುಂದೆ, ಸರ್ಕಾರದ ವಿರುದ್ಧ ರಿಟ್ ಅಪೀಲುಗಳನ್ನು (**WA No. 906/2025 (MV), 863/2025 (MV), 948/2025 (MV) & 962/2025 (MV)**) ಸಲ್ಲಿಸಿದ್ದು, ಸದರಿ ಪ್ರಕರಣಗಳ ವಿಚಾರಣೆ ನಡೆಸಿದ ಮಾನ್ಯ ನ್ಯಾಯಾಲಯವು ದಿನಾಂಕ: **23-01-2026** ರಂದು ಬೈಕ್ ಟ್ಯಾಕ್ಸಿ ಸೇವೆಯ ಕುರಿತು ಅಂತಿಮ ಆದೇಶವನ್ನು ಹೊರಡಿಸಿದ್ದು, ಸದರಿ ಆದೇಶವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಆದೇಶವು ಕೆಳಕಂಡಂತಿರುತ್ತದೆ. |
| (ಆ) | ಕೇಂದ್ರ ಸರ್ಕಾರವು ಬೈಕ್ ಟ್ಯಾಕ್ಸಿ ಸೇವೆಗಳಿಗೆ ಈಗಾಗಲೇ ಮಾರ್ಗಸೂಚಿಗಳನ್ನು ಹೊರಡಿಸಿದ್ದರೂ, ರಾಜ್ಯ ಸರ್ಕಾರವು ತನ್ನದೇ ಆದ ಸ್ಪಷ್ಟ ನೀತಿಯನ್ನು ರೂಪಿಸದೆ ನ್ಯಾಯಾಲಯದ ಮುಂದೆ "ಯಾವುದೇ ನೀತಿ ಇಲ್ಲ" ಎಂದು ತಿಳಿಸಲು ಕಾರಣಗಳೇನು; ಇದು ಸರ್ಕಾರದ ಆಡಳಿತಾತ್ಮಕ ವೈಫಲ್ಯವಲ್ಲವೇ; | |
| (ಇ) | ಪ್ರಸ್ತುತ ಯಾವುದೇ ಅಧಿಕೃತ ಮಾರ್ಗಸೂಚಿಗಳಿಲ್ಲದೆ ಬೈಕ್ ಟ್ಯಾಕ್ಸಿಗಳು ರಸ್ತೆಗಿಳಿದಿರುವುದರಿಂದ, ಪ್ರಯಾಣಿಕರ ಸುರಕ್ಷತೆ (**Safety measures**) ಮತ್ತು ವಿಮೆಯ (**Insurances**) ಜವಾಬ್ದಾರಿ ಯಾರದ್ದು; ಈ ಕುರಿತು ಸರ್ಕಾರವು ತುರ್ತಾಗಿ ಸಮಗ್ರ 'ನಿಯಂತ್ರಣ ಸಂಹಿತೆ'ಯನ್ನು ರೂಪಿಸಲಿದೆಯೇ; | |
| (ಈ) | ಬೈಕ್ ಟ್ಯಾಕ್ಸಿ ಚಾಲಕರಿಗೆ ಪೊಲೀಸ್ ಪರಿಶೀಲನೆ, ಅಂಗಸೂಕ್ಷ್ಮತೆ (**Gender Sensitivity**) ತರಬೇತಿ ಮತ್ತು ರಿಯಲ್ ಟೈಮ್ ಡಿಜಿಟಲ್ ಟ್ರ್ಯಾಕಿಂಗ್‌ನಂತಹ ಸುರಕ್ಷತಾ ಕ್ರಮಗಳನ್ನು ಕಡ್ಡಾಯಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | |
| (ಉ) | ಆಟೋ ರಿಕ್ಷಾ ಮತ್ತು ಕ್ಯಾಬ್ ಚಾಲಕರ ಹಿತರಕ್ಷಣೆಯ ಜೊತೆಗೆ, ಬೈಕ್ ಟ್ಯಾಕ್ಸಿಗಳಿಗೂ ಸಮಾನ ಅವಕಾಶ ಕಲ್ಪಿಸಿ 'ಸಂಯೋಜಿತ ನಗರ ಸಾರಿಗೆ ವ್ಯವಸ್ಥೆ'ಯನ್ನು (**Integrated Urban Transport System**) ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | |

| | ಪ್ರಶ್ನೆ | ಉತ್ತರ |
|---|---|---|
| | | 149. In view of the above, the motorcycle owners are at liberty to file applications for registration of their vehicles as transport vehicles (yellow board). We direct the State Government to consider such applications for the registration of motorcycles as transport vehicles and for the grant of permits to operate them as contract carriages. Whilst the concerned authorities are not precluded from examining relevant aspects for vehicle registration and issuance of permits, the same will not be denied on the ground that motorcycles cannot be operated as transport vehicles or contract carriages.<br><br>150. The Regional Transport Authority may also impose such conditions as it considers necessary, as attached to the said permits, in accordance with law and having regard to the provisions of Section 74(2) of the MV Act.<br><br>151. The concerned authorities shall consider the pending applications of the aggregators and pass appropriate orders. The aggregators are also at liberty to file fresh applications for licences. In the event such applications are filed, they will be considered in accordance with law and the observations of this Court in this decision.<br><br>152. The impugned order is set aside, and the appeals are allowed in the aforesaid terms.<br><br>ಈ ತೀರ್ಪಿನ ಕುರಿತು ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯವನ್ನು ಪಡೆದು ಕಾನೂನಾತ್ಮಕವಾಗಿ ಪರಿಶೀಲಿಸಿ, ಅಗತ್ಯ ಕ್ರಮ ವಹಿಸಲಾಗುವುದು. |

ಟಿಡಿ 17 ಟಿಡಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು.